## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 683(801) |
| ಸದಸ್ಯರ ಹೆಸರು | : | ಶ್ರೀ ಡಾ: ಎಂ.ಜಿ ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.12.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 02.02.2000ರ ಪೂರ್ವದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ: ಅನುದಾನ ವಂಚಿತ "ಡಿ" ಗ್ರೂಪ್ ನೌಕರರನ್ನು ಅನುದಾನಕ್ಕೆ ಒಳಪಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ | ಬಂದಿದ್ದಲ್ಲಿ ಸರ್ಕಾರವು ಈ ನೌಕರರನ್ನು ಅನುದಾನಕ್ಕೆ ಒಳಪಡಿಸದೆ ಇರಲು ಕಾರಣವೇನು: (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 52 ವಿವಿಧ 99, ದಿನಾಂಕ:02.02.2000ರಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳ ಸಿಬ್ಬಂದಿ ಮಾದರಿ ರಚನೆಯನ್ನು ಹೊರಡಿಸಲಾಗಿದ್ದು, ಸದರಿ ಮಾದರಿ ರಚನೆಯನ್ವಯ ಒಂದು ಗ್ರೂಪ್-ಡಿ ಹುದ್ದೆಯನ್ನು ಹೊಂದಲು ಸೀಮಿತಗೊಳಿಸಲಾಗಿದೆ.<br><br>ದಿನಾಂಕ: 02-02-2000ರ ಪೂರ್ವದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅನುದಾನ ರಹಿತವಾಗಿ ನೇಮಕ ಗೊಂಡ 'ಡಿ' ಗ್ರೂಪ್ ನೌಕರರನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಕೆಲವು ಷರತ್ತುಗಳನ್ನು ವಿಧಿಸಿ ಈ ಕೆಳಕಂಡಂತೆ ಮೂರು ಆಯುಕ್ತಾಲಯಗಳಿಗೆ ಅನುಮತಿ ನೀಡಲಾಗಿದೆ. |
| ಇ | ಈ ನೌಕರರನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು: | 1. ಸರ್ಕಾರದ ಪತ್ರ ಸಂಖ್ಯೆ: ಇಡಿ 283 ಎಸ್‌ಇಪಿ 2009, ದಿನಾಂಕ:23.11.2011ರಲ್ಲಿ 407 ಗ್ರೂಪ್ ಡಿ ಸಿಬ್ಬಂದಿಗಳು.<br>2. ಸರ್ಕಾರದ ಪತ್ರ ಸಂಖ್ಯೆ:ಇಡಿ 29 ಎಸ್‌ಇಪಿ 2011, ದಿನಾಂಕ:20.01.2014ರಲ್ಲಿ 908 ಗ್ರೂಪ್ ಡಿ ಸಿಬ್ಬಂದಿಗಳು.<br>3. ಸರ್ಕಾರದ ಪತ್ರ ಸಂಖ್ಯೆ:ಇಡಿ 4 ಎಸ್‌ಇಪಿ 2014, ದಿನಾಂಕ:27.06.2014ರಲ್ಲಿ 63 ಸಿಬ್ಬಂದಿಗಳು.<br>4. ಇಡಿ 37 ಎಸ್‌ಇಪಿ 2014, ದಿನಾಂಕ:01.04.2015 ರಲ್ಲಿ 148 ಗ್ರೂಪ್ -ಡಿ ಸಿಬ್ಬಂದಿಗಳು.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 8 ಎಸ್‌ಇಪಿ 2015, ದಿನಾಂಕ:26.09.2017ರಲ್ಲಿ "The Karnataka educational institutions (recruitment and terms and conditions of service of employees in private aided primary and secondary educational institutions |

(Amendment) rules, 2017")ನ್ನು ಜಾರಿಗೆ ತಂದು, ನಿಯಮಾವಳಿಯ ಟಿಪ್ಪಣಿ-2ರಲ್ಲಿ ಈ ಕೆಳಗಿನಂತೆ ಸೇರ್ಪಡೆ ಮಾಡಲಾಗಿದೆ:-

Note-2- auxiliary non-teaching service in an aided high school including service such as watch and ward, class room arrangements, daily upkeep of school premises, support in science labs, movement outsource basis. The government may provide suitable grant- in-aid for such outsourced services."

ಮೇಲಿನ ತಿದ್ದುಪಡಿ ನಿಯಮದಲ್ಲಿ ಖಾಸಗಿ ಪ್ರೌಢಶಾಲೆಗಳಲ್ಲಿ "watch a nd ward, class room arrangements, daily upkeep of school premises, support in science labs, movement of teaching-learning materials" ಈ ರೀತಿಯ ಸೇವೆಯನ್ನು ಹೊರಗುತ್ತಿಗೆ ಸಿಬ್ಬಂದಿಯ ಮೂಲಕ ಪಡೆಯಲು ತಿಳಿಸಿದೆ.

ದಿನಾಂಕ: 02.02.2000ರ ಪೂರ್ವದಲ್ಲಿ ನೇಮಕಗೊಂಡು ಸತತವಾಗಿ ಕಾರ್ಯ ನಿರ್ವಹಿಸುತ್ತಿರುವ ಅನುದಾನಕ್ಕೆ ಒಳಪಡದೆ ಬಾಕಿ ಉಳಿದಿರುವ ಗ್ರೂಪ್ ಡಿ ನೌಕರರನ್ನು ಅನುದಾನಕ್ಕೆ ಒಳಪಡಿಸಲು ಕೋರಿಕೆಗಳು ಸ್ವೀಕೃತವಾಗಿದ್ದು, ಸದರಿ ಕೋರಿಕೆಗಳನ್ನು ಕಡತ ಸಂಖ್ಯೆ:ಇಡಿ 08 ಎಸ್‌ಇಪಿ 2015ರಲ್ಲಿ ಪರಿಶೀಲಿಸಿ, ದಿನಾಂಕ:20.07.2019ರಂದು, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು. ಆರ್ಥಿಕ ಇಲಾಖೆಯು ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ.

"ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 08 ಎಸ್‌ಇಪಿ 2015, ದಿನಾಂಕ:26.09.2017ರಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳ ಸಿಬ್ಬಂದಿ ಮಾದರಿಗೆ ತಿದ್ದುಪಡಿಯನ್ನು ತರಲಾಗಿದ್ದು, ಇದರನ್ವಯ ಗ್ರೂಪ್ ಡಿ ಹುದ್ದೆಯನ್ನು ವೇತನಾನುದಾನಕ್ಕೆ ಒಳಪಡಿಸದೆ ಹೊರಗುತ್ತಿಗೆ ಮೂಲಕ ಸೇವೆಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಹ ಗ್ರೂಪ್ ಡಿ ಹುದ್ದೆಗಳನ್ನು ಹೊರಗುತ್ತಿಗೆ ಮುಖಾಂತರ ತುಂಬಲು ನಿರ್ಧರಿಸಲಾಗಿರುತ್ತದೆ. ಅದರಂತೆ, ರಾಜ್ಯದಾದ್ಯಂತ ಇದೇ ನೀತಿಯನ್ನು ಅನುಸರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಒದಗಿಸದೇ ಇರುವ ಗ್ರೂಪ್ ಡಿ ಹುದ್ದೆಗಳನ್ನು ಅನುದಾನಿತ ಶಾಲೆಗಳಲ್ಲಿ ಒದಗಿಸುವುದು ಸೂಕ್ತವಲ್ಲ. ಆದುದರಿಂದ, ಅನುದಾನಿತ ಪ್ರೌಢ ಶಾಲೆಗಳಲ್ಲಿನ ಗ್ರೂಪ್-ಡಿ ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ ಎಂದು ಆರ್ಥಿಕ ಇಲಾಖೆಯು ದಿನಾಂಕ: 31.05.2021ರಂದು ಅಭಿಪ್ರಾಯ ಪಟ್ಟಿರುತ್ತದೆ".

| | | |
|---|---|---|
| ಈ | ಯಾವ ಕಾಲಮಿತಿಯಲ್ಲಿ ಈ ನೌಕರರನ್ನು ಅನುದಾನಕ್ಕೆ ಒಳಪಡಿಸಲಾಗುವುದು? | "ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 08 ಎಸ್‌ಇಪಿ 2015, ದಿನಾಂಕ:26.09.2017ರಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳ ಸಿಬ್ಬಂದಿ ಮಾದರಿಗೆ ತಿದ್ದುಪಡಿಯನ್ನು ತರಲಾಗಿದ್ದು, ಇದರನ್ವಯ ಗ್ರೂಪ್ ಡಿ ಹುದ್ದೆಯನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವಿರುವುದಿಲ್ಲ. |

**ಇಪಿ 476 ಎಸ್‌ಇಎಸ್ 2024**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**